ಮಿಲಿಯನೇರ್‌ಗಳ ರಸ್ತೆಯಲ್ಲಿ ಅವನಿಗೆ ಮನೆಯೂ ಇತ್ತು. ಇನ್ನೊಂದರ್ಥದಲ್ಲಿ ಒಬ್ಬನೇ ಮಗನಾಗಿ ಅವನಪ್ಪನನ್ನು ಅವನು ಪರೋಕ್ಷವಾಗಿ ಶಿಕ್ಷಿಸುತ್ತಿದ್ದ. ಶೀತಲ ಸಮರ ನಡೆಸುತ್ತಿದ್ದ. ಅವನ ಮೋಡಿ ಮಾಡುವ ನಗು ಮುಖ ಅವರಪ್ಪನಿಗಾಗಿಯೇ ಚಿಕ್ಕಂದಿನಿಂದ ರೂಢಿಸಿಕೊಂಡ ಮುಖವಾಡವಾಗಿತ್ತು.

ನನ್ನನ್ನೂ ಸೇರಿಸಿ ಅಲ್ಲಿ ಕುಳಿತವರೆಲ್ಲ ಮುಖವಾಡಗಳನ್ನು ಹೊತ್ತವರೇ ಆಗಿದ್ದರು.

ನನಗೆ ಎರಡು ವರ್ಷಗಳಿಂದ ಪರಿಚಿತರಾದವರ ಬದುಕಿನ ಅಪರಿಚಿತ ಪುಟಗಳ ದರ್ಶನವಾಗುತ್ತ ಹೋದಂತೆ ಅವರ್‍ಯಾರೂ ಮೊದಲಿನಂತೆ ಕಾಣಲಿಲ್ಲ. ಅವರ ಮೇಲಿದ್ದ ಪೂರ್ವಗ್ರಹಗಳೆಲ್ಲವೂ ಹಿಮದಂತೆ ಕರಗತೊಡಗಿದ್ದವು. ಆತ್ಮೀಯತೆಯ ಬಿಸುಪು ನಮ್ಮ ನಡುವೆ ಹರಿದಾಡತೊಡಗಿತ್ತು. ಅದರಲ್ಲಿ ಬದುಕಿನ ಹರಿಯುವಿಕೆಯ ನಡುವಿನ ತಡೆಗಳಾಗಿದ್ದ ಕಲ್ಲಿನ ಬಂಡೆಗಳು ಕಾಣತೊಡಗಿದ್ದವು. ವಿಧಿ ಎಲ್ಲರ ಬದುಕಿನಲ್ಲಿಯೂ ಒಂದಲ್ಲ ಒಂದು ರೀತಿಯಲ್ಲಿ ಆಟವಾಡುತ್ತ ಬದುಕು ಚಲಿಸುವ ದಿಕ್ಕನ್ನೆ ಬದಲಿಸಿತ್ತು.

ನಾಲ್ಕನೆಯ ದಿನ ಬಂದರೆ ನಾವೆಲ್ಲ ನಮ್ಮ ನೋವುಗಳನ್ನು ಅಡಗಿಸಿಕೊಂಡು, ಜಗತ್ತಿನ ಇತರರ ನೋವಿಗೆ ಸ್ಪಂದಿಸುತ್ತ ಹೋಗುವುದು ಸೋಜಿಗವೆನ್ನಿಸಿತು. ಯಾವ ರೋಗಿಗಳಿಗೆ ನಮ್ಮಂತಹ ವೈದ್ಯರ ನೋವುಗಳನ್ನು ಅರಿಯುವ ಅಗತ್ಯವಿರುತ್ತದೆ?

ಈ ಸಂಜೆ, ವೈನಿನ ಕಹಿ ನಾಲ್ಕು ಪಟ್ಟು ಜಾಸ್ತಿಯೆನಿಸಿ ಎಲ್ಲರಿಗೂ ಸಾಕೆನಿಸಿಬಿಟ್ಟಿತ್ತು. ಮೇನ್ ಕೋರ್ಸ್‌ಗೆ ರೆಡಿಯೆಂದು ಅಲೆಕ್ಸ್ ಸನ್ನೆ ಮಾಡಿದ.

ಎಲ್ಲರ ಮುಂದೆ ಸ್ವೀಡನ್ನಿನ ಒಂದು ವಿಶೇಷ ಖಾದ್ಯ ಬಂದು ಕುಳಿತಿತು. ಇದು ಉತ್ತರ ಸ್ವೀಡನ್ನಿನ ಅತಿ ಜನಪ್ರಿಯ ಖಾದ್ಯ ಅಂತ ವೇಟರ್ ವರ್ಣಿಸಿದ. ಕ್ರಿಸ್ಮಸ್‌ನಲ್ಲಿ 'ಜಿಂಗಲ್ ಬೆಲ್... ಜಿಂಗಲ್ ಬೆಲ್...' ಎಂದು ಬರುವ ಸಾಂತಾಕ್ಲಾಸ್‌ನ ಸಾರೋಟನ್ನು ಎಳೆಯುವ ಹಿಮಸಾರಂಗ ಅಥವಾ ರೇಯ್ನ್ ಡೀರ್‌ನ ಮಾಂಸದ ಖಾದ್ಯ ಅದು.

ಜನರು ಸಂಭ್ರಮಿಸವುದು, ಪೂಜಿಸುವುದು, ಕಲ್ಪಿಸುವುದು, ಅಗತ್ಯಕ್ಕೋ, ಅಹಂಗೋ, ಕಷ್ಟಗಳ ಮರೆಯಲೋ ಗೊತ್ತಿಲ್ಲ. ಒಟ್ಟಿನಲ್ಲಿ ಎಲ್ಲರನ್ನು ಒಂದಲ್ಲ ಒಂದು ರೀತಿಯಲ್ಲಿ ಬಲಿಯಾಗಿಸಿ ಅಣಕಿಸುವ ಈ ಪ್ರಪಂಚದ ವಿಧಿ ವಿಧಾನಗಳೇ ಬದುಕನ್ನು ಆವರಿಸಿ ಬಲಿಕೊಟ್ಟಂತೆ ಅನ್ನಿಸಿಬಿಟ್ಟಿತು. ಅದಕ್ಕೆ ತಕ್ಕಂತೆ, ಮಕ್ಕಳಿದ್ದಾಗಿನಿಂದ ಹಿಮಸಾರಂಗದ ರಮ್ಯ ಕಥೆಗಳನ್ನು ಕೇಳುತ್ತ, ಕಲ್ಪಿಸುತ್ತ, ಸಂತೋಷಿಸುತ್ತ ಬೆಳೆಯುವ ಮನುಷ್ಯರೇ ಆ ಹಿಮಸಾರಂಗದ ಮಾಂಸವನ್ನು ತಿನ್ನುವುದನ್ನು ನೋಡುತ್ತ ಕುಳಿತಿದ್ದೆ. ತರ್ಕಕ್ಕೆ ಬದುಕು ಮತ್ತು ಜಗತ್ತು ಎಂದೂ ಸಿಗುವುದಿಲ್ಲವೆನಿಸಿತು.

'ಯುವರ್ ಟರ್ನ್' ಎಂದರು.

ನನ್ನ ಕಥೆಯನ್ನು ಆರಂಭಿಸಿದೆ.


**ಡಾ. ಪ್ರೇಮಲತ ಬಿ.**

ವೃತ್ತಿಯಲ್ಲಿ ದಂತವೈದ್ಯೆ. ಕಳೆದ 19 ವರ್ಷಗಳಿಂದ ಇಂಗ್ಲೆಂಡಿನಲ್ಲಿ ವಾಸ. ಮೂಲತಃ ತುಮಕೂರಿನವರು. ದಿನಪತ್ರಿಕೆ, ವಾರಪತ್ರಿಕೆ ಮತ್ತು ಅಂತರ್ಜಾಲ ತಾಣಗಳಲ್ಲಿ ಲೇಖನ ಮತ್ತು ಕವನಗಳು ಪ್ರಕಟವಾಗಿವೆ. 'ಪ್ರಜಾವಾಣಿ' ಪ್ರೇಮಪತ್ರ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ, 'ಸುಧಾ' ಯುಗಾದಿ ಪ್ರಬಂಧ ಸ್ಪರ್ಧೆಯಲ್ಲಿ ಬಹುಮಾನ ಪಡೆದಿದ್ದಾರೆ. ಅವರ 'ಬಾಯೆಂಬ ಬ್ರಹ್ಮಾಂಡ' ಎನ್ನುವ ವೃತ್ತಿಪರ ಕಿರು ಪುಸ್ತಕವನ್ನು ಕನ್ನಡ ಸಂಸ್ಕೃತಿ ಇಲಾಖೆ ಪ್ರಕಟಿಸಿದೆ.